| Publication: | Vijayakarnataka | Edition: | Bangalore |
|---|---|---|---|
| Published Date: | 23 July 2017 | Page No.: | 8 |
| | | Display: | 1/1 |

# ಟಿಸಿಎಸ್ ಐಟಿ ವಿಜ್ ರಸಪ್ರಶ್ನೆ ಆ.3ಕ್ಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಶಾಲಾ ಮಕ್ಕಳಿಗಾಗಿ 'ಟಿಸಿಎಸ್ ಐಟಿ ವಿಜ್ 2017' ಎಂಬ ರಸಪ್ರಶ್ನೆಯನ್ನು ಬೆಂಗಳೂರು ಸೇರಿದಂತೆ ದೇಶಾದ್ಯಂತ 12 ನಗರಗಳಲ್ಲಿ ಆಯೋಜಿಸಿದೆ.

ಆ. 3ರಂದು ಬೆಂಗಳೂರಿನ ವೈಯಾಲಿಕಾವಲ್‌ನಲ್ಲಿರುವ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಸ್ಪರ್ಧೆ ನಡೆಯಲಿದೆ. 8 ರಿಂದ 12 ನೇ ತರಗತಿ (ಪಿಯು ಮಕ್ಕಳು) ವರೆಗಿನ ವಿದ್ಯಾರ್ಥಿಗಳು ಭಾಗ ವಹಿಸಬಹುದು. ಪ್ರವೇಶ ಶುಲ್ಕ ಇರುವುದಿಲ್ಲ, ಪ್ರತಿ ಶಿಕ್ಷಣ ಸಂಸ್ಥೆ ತಲಾ ಇಬ್ಬರು ವಿದ್ಯಾರ್ಥಿ ಗಳನ್ನು ಒಳಗೊಂಡ 10 ತಂಡ(ಒಟ್ಟು 20 ಮಂದಿ)ಗಳನ್ನು ಕಳುಹಿಸಬಹುದು.

**ಪ್ರತಿ ಶಾಲೆಯಿಂದ 10 ತಂಡಕ್ಕೆ ಅವಕಾಶ**

ಸಂಬಂಧಪಟ್ಟ ಸಂಸ್ಥೆಗಳು 'ಟಿಸಿಎಸ್ ಐಟಿ ವಿಜ್ ಕೋ-ಆರ್ಡಿನೇಟರ್, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಎಸ್ಐಎಂ ಟವರ್, ನಂ.18, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು - 009' ಇಲ್ಲಿಗೆ ಜು. 29 ರೊಳಗೆ ಅರ್ಜಿ ಕಳುಹಿಸಬೇಕು. ಮಾಹಿತಿಗಾಗಿ ದೂ.ಸಂ. 080 6724 6000 ಸಂಪರ್ಕಿಸಬಹುದು. ವೆಬ್‌ಸೈಟ್ **www.tcsitwiz.com** ಇಲ್ಲಿ ನೋಂದಣಿ ಮಾಡಿಕೊಳ್ಳಬಹುದು. ತಂತ್ರಜ್ಞಾನ ಪರಿಸರ, ವ್ಯವಹಾರ, ಹೊಸ ಟ್ರೆಂಡ್, ಕ್ಲೌಡ್ ಕಂಪ್ಯೂಟಿಂಗ್, ಟೆಲಿಕಾಂ, ಬಯೋಮೆಟ್ರಿಕ್ಸ್, ರೋಬೋಟಿಕ್ಸ್, ಶಿಕ್ಷಣ, ಮನರಂಜನೆ, ಮಲ್ಟಿ ಮೀಡಿಯಾ, ಇಂಟರ್‌ನೆಟ್, ಬ್ಯಾಂಕಿಂಗ್, ಜಾಹೀರಾತು, ಕ್ರೀಡೆ, ಸಾಮಾಜಿಕ ಮಾಧ್ಯಮ, ಮಾಹಿತಿ ತಂತ್ರಜ್ಞಾನದ ಪರಿಣಾಮ ಇತ್ಯಾದಿ ವಿಷಯಗಳ ಮೇಲೆ ಈ ಕ್ವಿಜ್ ಕೇಂದ್ರೀಕೃತವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಬಹುಮಾನ

ಪ್ರಾದೇಶಿಕ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಾಗುವ ತಂಡಕ್ಕೆ 60 ಸಾವಿರ ರೂ., ರನ್ನರ್ ಅಪ್ ತಂಡಕ್ಕೆ 40 ಸಾವಿರ ರೂ.ನ ಗಿಫ್ಟ್ ಓಚರ್ ನೀಡಲಾಗುವುದು. ಆರು ಸುತ್ತಿನ ಅಂತಿಮ ಸ್ಪರ್ಧಿಗಳಿಗೆ ಡಬಲ್ ಜಿಮ್ ಬ್ಯಾಗ್, ಒಟಿಜಿ ಪೆನ್ ಡ್ರೈವ್, ಇಯರ್‌ಫೋನ್ ಮತ್ತು ಬ್ಲೂಟೂತ್ ಸ್ಪೀಕರ್‌ಗಳನ್ನು ಬಹುಮಾನದ ರೂಪದಲ್ಲಿ ನೀಡಲಾಗುವುದು. ಚಾಂಪಿಯನ್ ಆದ ವಿದ್ಯಾರ್ಥಿಗಳ ಜತೆಗೆ ಪೋಷಕರು/ಶಿಕ್ಷಕರು ಮುಂಬೈನಲ್ಲಿ (ಡಿಸೆಂಬರ್‌ನಲ್ಲಿ ನಡೆಯುವ ಸ್ಪರ್ಧೆ) ನಡೆಯಲಿರುವ ರಾಷ್ಟ್ರೀಯ ಫೈನಲ್‌ಗೆ ತೆರಳಲು ಅವಕಾಶ ಕಲ್ಪಿಸಲಾಗುತ್ತದೆ.

## ಟ್ವೀಟ್ ಸ್ಪರ್ಧೆ

ಪ್ರಾದೇಶಿಕ ಫೈನಲ್‌ನಲ್ಲಿ ಟ್ವೀಟ್ ಸ್ಪರ್ಧೆ ಸಹ ಆಯೋಜಿಸಲಾಗಿದೆ. ಇಲ್ಲಿ ಅತಿ ಹೆಚ್ಚು ಟ್ವೀಟ್ ಮಾಡಿದ ಮತ್ತು ಅತ್ಯುತ್ತಮವಾದುದನ್ನು 'ಟ್ವೀಟ್ ಆಫ್ ದಿ ಡೇ' ಎಂದು ಪರಿಗಣಿಸಿ ಅವರಿಗೆ ಬಹುಮಾನ ನೀಡಲಾಗುವುದು. ಪ್ರಾದೇಶಿಕ ಫೈನಲ್ ಅನ್ನು ವೆಬ್‌ಸೈಟ್‌ನಲ್ಲಿ ನೇರಪ್ರಸಾರ ಮಾಡಲಾಗುವುದು.